# ರಾಮಕೃಷ್ಣ ಸುದ್ದಿ ಸಂಚಯ

ESTD:1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು – 575 003

Website: www.ramakrishnacredit.com Email: ho@ramakrishnacredit.com

ಸಂಪುಟ VIII ಸಂಚಿಕೆ : 3 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಅಕ್ಟೋಬರ್ – ಡಿಸೆಂಬರ್ 2023


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2024ನೇ ವರ್ಷ, ನಮಗೆಲ್ಲರಿಗೂ ಸುಖ, ಶಾಂತಿ ನೆಮ್ಮದಿಯನ್ನು ನೀಡಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತಾ, ತಮಗೆ 2024ನೇ ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಈ ಮೂಲಕ ತಿಳಿಸುತ್ತಿದ್ದೇನೆ.

ನಮ್ಮ ಸಂಘವು 2023–24ನೇ ಸಾಲಿನ ಮೂರನೇ ತ್ರೈಮಾಸಿಕ ಅವಧಿ ಅಂತ್ಯ 31.12.2023ಕ್ಕೆ ರೂ.925 ಕೋಟಿ ಮೀರಿದ ಒಟ್ಟು ವ್ಯವಹಾರವನ್ನು ಹೊಂದಿ ಈವರೆಗೆ ಒಟ್ಟು ರೂ.139 ಕೋಟಿ ವ್ಯವಹಾರದೊಂದಿಗೆ ಗಣನೀಯ ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ.

### 31.12.2023 ಸಂಘದ ವ್ಯವಹಾರದ ಪಕ್ಷಿನೋಟ (Provisional Figures) ಈ ಕೆಳಗಿನಂತಿದೆ.

| ಕ್ರ. ಸಂ. | ಕಾರ್ಯ ವಿಭಾಗ | ಡಿಸೆಂಬರ್ 2022ಕ್ಕೆ ಇದ್ದಂತೆ (ರೂ) | ಡಿಸೆಂಬರ್ 2023ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.429 ಕೋಟಿ | ರೂ.499 ಕೋಟಿ | ರೂ.70 ಕೋಟಿ | 16% |
| 2 | ಸಾಲ ಮತ್ತು ಮುಂಗಡ | ರೂ.357 ಕೋಟಿ | ರೂ.426 ಕೋಟಿ | ರೂ.69 ಕೋಟಿ | 19% |
| 3 | ಒಟ್ಟು ವ್ಯವಹಾರ | ರೂ.786 ಕೋಟಿ | ರೂ.925 ಕೋಟಿ | ರೂ.139 ಕೋಟಿ | 18% |
| 4 | ನಿವ್ವಳ ಲಾಭ | ರೂ.5.01 ಕೋಟಿ | ರೂ.6.58 ಕೋಟಿ | ರೂ.1.57 ಕೋಟಿ | 31% |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

### 31.12.2022ಕ್ಕೆ ಇದ್ದ ವ್ಯವಹಾರವನ್ನು 31.12.2023ರ ವ್ಯವಹಾರಕ್ಕೆ ಹೋಲಿಸಿದಾಗ

1. ಠೇವಣಾತಿಯಲ್ಲಿ ರೂ.70 ಕೋಟಿ ಹೆಚ್ಚಳ (ಶೇ.16 ವೃದ್ಧಿ)
2. ಸಾಲ ಮತ್ತು ಮುಂಗಡದಲ್ಲಿ ರೂ. 69 ಕೋಟಿ ಹೆಚ್ಚಳ (ಶೇ.19 ವೃದ್ಧಿ).
3. ಒಟ್ಟು ವ್ಯವಹಾರದಲ್ಲಿ ರೂ.139 ಕೋಟಿ ವೃದ್ಧಿ. (ಶೇ.18 ವೃದ್ಧಿ)
4. ನಿವ್ವಳ ಅನುತ್ಪಾದಕ ಆಸ್ತಿ (Net NPA) 0%.
5. ನಿವ್ವಳ ಲಾಭದಲ್ಲಿ ರೂ.1.57 ಕೋಟಿ ಹೆಚ್ಚಳ (ಶೇ.31 ವೃದ್ಧಿ)

ಸಂಘವು 31.12.2023 ರವರೆಗಿನ ಅವಧಿಯಲ್ಲಿ ಸಾಧಿಸಿರುವ ಪ್ರಗತಿಯ ಅಂಕಿ ಅಂಶಗಳನ್ನು ತಮ್ಮ ಮುಂದೆ ಪ್ರಸ್ತುತ ಪಡಿಸುತ್ತಾ ಸಂಘದ ಈ ಸರ್ವಾಂಗೀಣ ಪ್ರಗತಿಗೆ ಸದಾ ಸಹಕಾರವನ್ನು ನೀಡುತ್ತಿರುವ, ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ, ಮಾರ್ಗದರ್ಶನ ನೀಡುತ್ತಿರುವ ಸಂಘದ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರುಗಳಿಗೆ ಹಾಗೂ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿರುತ್ತಿರುವ ಸಿಬ್ಬಂದಿ ವೃಂದಕ್ಕೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಿಮ್ಮೆಲ್ಲರ ಸಹಕಾರದಿಂದ ಮುಂದಿನ ಮೂರು ತಿಂಗಳಲ್ಲಿ ಇನ್ನಷ್ಟು ಹೆಚ್ಚಿನ ಪ್ರಗತಿಯನ್ನು ಹೊಂದಿ ವರ್ಷಾಂತ್ಯ 31.03.2024ಕ್ಕೆ ಗುರಿ ಮೀರಿದ ಸಾಧನೆಯನ್ನು ಮಾಡುವಂತಾಗಲೆಂದು ಆಶಿಸುತ್ತೇನೆ.

**ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು

## ದಿನಾಂಕ 18.11.2023 ರಂದು ಮಂಗಳೂರಿನಲ್ಲಿ ಜರಗಿದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ರಾಜ್ಯಮಟ್ಟದ ಸಮಾರಂಭದಲ್ಲಿ ಸಂಘಕ್ಕೆ "ಉತ್ತಮ ಪತ್ತಿನ ಸಹಕಾರಿ ಸಂಘ" ಪ್ರಶಸ್ತಿ



ದಿನಾಂಕ 18.11.2023ರಂದು ಮಂಗಳೂರಿನ ಉರ್ವ ಮಾರ್ಕೆಟ್ ಮೈದಾನದಲ್ಲಿ ಜರಗಿದ ರಾಜ್ಯ ಮಟ್ಟದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯಲ್ಲಿ ಸಹಕಾರ ರತ್ನ ಡಾ। ಎಂ. ಎನ್. ರಾಜೇಂದ್ರ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರಕಾರದ ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣರವರು, ಮಂಗಳೂರು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ. ಟಿ. ದೇವೇಗೌಡರವರು, ಮಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ವೇದವ್ಯಾಸ್ ಡಿ. ಕಾಮತ್ ಹಾಗೂ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸಂಘದ ಈ ಪ್ರಶಸ್ತಿಗೆ ಸಂಘದ ಸರ್ವ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

## ಸಂಘದಲ್ಲಿ 25 ವರ್ಷ ಸೇವೆ ಪೂರೈಸಿದ ಸಿಬ್ಬಂದಿಗಳಿಗೆ ಅಭಿನಂದನಾ ಕಾರ್ಯಕ್ರಮ



ದಿನಾಂಕ 31.12.2023 ಆದಿತ್ಯವಾರದಂದು ಸಂಘವು ತನ್ನ ಸಂಘದಲ್ಲಿ 25 ವರ್ಷ ಸೇವೆ ಪೂರೈಸಿದ 16 ಸಿಬ್ಬಂದಿಗಳಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ವಹಿಸಿದ್ದರು. ಸಮಾರಂಭದ ಉದ್ಘಾಟಕರಾದ ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಮಂಗಳೂರು ಇದರ ನಿಕಟಪೂರ್ವ ಆಡಳಿತ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ। ಮಹಾಬಲೇಶ್ವರ ಭಟ್ ಎಂ.ಎಸ್. ರವರನ್ನು ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಸಂಘದಲ್ಲಿ 25 ವರ್ಷ ಸೇವೆ ಪೂರೈಸಿದ 16 ಸಿಬ್ಬಂದಿಗಳನ್ನು ಡಾ। ಮಹಾಬಲೇಶ್ವರ ಭಟ್ ಎಂ.ಎಸ್. ಸನ್ಮಾನಿಸಿದರು. ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿಯವರ ಶುಭ ಸಂದೇಶವನ್ನು ವಾಚಿಸಲಾಯಿತು. ನಿರ್ದೇಶಕರುಗಳಾದ ಡಾ। ಸುಭಾಶ್ಚಂದ್ರ ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಪಿ. ಬಿ. ದಿವಾಕರ ರೈ, ಶ್ರೀ ಕುಂಬ್ರ ದಯಾಕರ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಇವರುಗಳು ಉಪಸ್ಥಿತರಿದ್ದರು.



ಡಾ। ಮಹಾಬಲೇಶ್ವರ ಭಟ್ ಎಂ.ಎಸ್. ರವರಿಂದ ಕಾರ್ಯಕ್ರಮದ ಉದ್ಘಾಟಣೆ



ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರಿಂದ ಪ್ರಾಸ್ತಾವಿಕ ಭಾಷಣ




ಸಂಘದ ವತಿಯಿಂದ ಡಾ। ಮಹಾಬಲೇಶ್ವರ ಭಟ್ ಎಂ.ಎಸ್. ರವರಿಗೆ ಸನ್ಮಾನ




ಉದ್ಘಾಟಕರಿಂದ ಸಿಬ್ಬಂದಿಗಳನ್ನುದ್ದೇಶಿ ಮಾತು

## ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೈಕ್ಷಣಿಕ ಸಾಧನೆ ಮಾಡಿದ ಸಂಘದ ಸಿಬ್ಬಂದಿ ಮತ್ತು ಸದಸ್ಯರ ಮಕ್ಕಳಿಗೆ ಸ್ಥಾಪಕಾಧ್ಯಕ್ಷ ಕೆ.ಬಿ. ಜಯಪಾಲ ಶೆಟ್ಟಿ ಪ್ರತಿಭಾ ಪುರಸ್ಕಾರ





ದಿನಾಂಕ 05.11.2023ರಂದು 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ಸಂಘದ ಸಿಬ್ಬಂದಿಗಳ ಮತ್ತು ಸದಸ್ಯರ ಮಕ್ಕಳಿಗೆ ಸಂಘದ ಸ್ಥಾಪಕಾಧ್ಯಕ್ಷ ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವನ್ನು ಆಯೋಜಿಸಲಾಯಿತು. ಈ ಸಮಾರಂಭದಲ್ಲಿ ಉದ್ಘಾಟಕರಾಗಿ ಆಗಮಿಸಿದ ಮಂಗಳೂರು ಮಹಾನಗರ ಪಾಲಿಕೆಯ ಮಹಾಪೌರ ಸುಧೀರ್ ಶೆಟ್ಟಿ ಕಣ್ಣೂರು ಮತ್ತು ಮುಖ್ಯ ಅತಿಥಿಯಾಗಿ ಮಂಗಳೂರು ಮಹಾನಗರ ಪಾಲಿಕೆಯ ಪ್ರತಿಪಕ್ಷ ನಾಯಕ ಡಿ. ಪ್ರವೀಣ್‌ಚಂದ್ರ ಆಳ್ವರವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಉದ್ಘಾಟಕರು, ಮುಖ್ಯ ಅತಿಥಿ, ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕರುಗಳು ಒಡಗೂಡಿ ವಿದ್ಯಾರ್ಥಿಗಳಿಗೆ 'ಸ್ಥಾಪಕಾಧ್ಯಕ್ಷ ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ' ಪ್ರದಾನ ಮಾಡಿದರು.




ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು



ಪಿಯುಸಿ ವಿದ್ಯಾರ್ಥಿಗಳು

## ದಿನಾಂಕ 30.11.2023ರಂದು ಪುತ್ತೂರಿನಲ್ಲಿ ಜರಗಿದ ಸಹಕಾರಿ ಕ್ರೀಡಾಕೂಟದಲ್ಲಿ ಸಂಘದ ಭಾಗವಹಿಸುವಿಕೆ

ದಿನಾಂಕ 30.11.2023ರಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು ಮತ್ತು ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ (ರಿ.), ಮಂಗಳೂರು ಇದರ ಸಹಭಾಗಿತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಹಾಗೂ ನವೋದಯ ಸ್ವಸಹಾಯ ಸಂಘಗಳ ಸದಸ್ಯರುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟ ಪುತ್ತೂರು ಸರಕಾರಿ ಪದವಿಪೂರ್ವ ಕಾಲೇಜು, ಕೊಂಬೆಟ್ಟುವಿನಲ್ಲಿ ಆಯೋಜಿಸಿದ್ದು, ಈ ಕ್ರೀಡಾಕೂಟದಲ್ಲಿ ನಮ್ಮ ಸಂಘದ ಸಿಬ್ಬಂದಿಗಳು ಭಾಗವಹಿಸಿ ಪ್ರಶಸ್ತಿ ವಿಜೇತರಾಗಿರುವ ಸಂದರ್ಭ.











## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀಮತಿ ಹರಿಣಿ ರೈ ಬಿ. | ಸುಳ್ಯ | ಶ್ರೀ ವಿನಯ ಕುಮಾರ್ ಶೆಟ್ಟಿ | ಮೂಡಬಿದ್ರಿ |
| ಕು. ಸಪ್ತಮಿ ಎಸ್. ರೈ | ಪುತ್ತೂರು | ಶ್ರೀ ರೋಹಿತ್ ಎಂ.ಜೆ. | ಬೆಳ್ತಂಗಡಿ |
| ಶ್ರೀಮತಿ ವೀಣಾ ಶೆಟ್ಟಿ | ಕೈಕಂಬ | ಕು. ರಮ್ಯ | ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ. | ವಿಟ್ಲ | ಶ್ರೀ ರಮೇಶ್ ಕೆ. | ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್ | ಶಿರ್ವ | ಶ್ರೀ ಪಾಂಡುರಂಗ ನ್ಾಯಕ್ | ಬ್ರಹ್ಮಾವರ |
| ಶ್ರೀಮತಿ ರಾಧಿಕ ಎಂ. | ಸುಳ್ಯ | ಶ್ರೀ ನಿತೇಶ್ ಕುಮಾರ್ | ಮಂಗಳೂರು |
| ಶ್ರೀ ಹರೀಶ್ | ಸುರತ್ಕಲ್ | ಕು। ಸ್ವಾತಿ | ಕುಂದಾಪುರ |
| ಶ್ರೀಮತಿ ಸನಿಹ ಶೆಟ್ಟಿ | ಕೇಂದ್ರ ಕಛೇರಿ | ಶ್ರೀ ಮಿಲನ್ ಎಂ. | ಸುಳ್ಯ |
| ಶ್ರೀ ಗಣೇಶ | ಕೇಂದ್ರ ಕಛೇರಿ | ಕು। ಅಕ್ಷತ | ಪುತ್ತೂರು |

## ಶ್ರದ್ಧಾಂಜಲಿ

ಸಂಘದ ಮಂಗಳೂರು ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ರಾಜ್‌ಗೋಪಾಲ್ ಶೆಟ್ಟಿ ಯವರು ದೈವಾಧೀನರಾಗಿರುವರು. ಅಗಲಿದ ದಿವ್ಯ ಚೇತನಕ್ಕೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಅಭಿನಂದನೆಗಳು

- ಸಂಘದ ಮುಲ್ಕಿ ಶಾಖೆಯ ಸಿಬ್ಬಂದಿ ಶ್ರೀ ರಮೇಶ್ ಕೆ. ರವರ ಹೊಸ ಮನೆ "ಮಾತೃಶ್ರೀ ನಿಲಯ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು. ಶ್ರೀ ರಮೇಶ್ ಕೆ.ರವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಕಡಬ ಶಾಖೆಯ ಸಿಬ್ಬಂದಿ ಚಿ।ಸೌ। ಕಾವ್ಯಶ್ರೀಯವರ ವಿವಾಹವು ಚಿ। ಅಶ್ವಿನ್‌ರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ಕೇಂದ್ರ ಕಛೇರಿ ಸಿಬ್ಬಂದಿ ಚಿ। ಶಮಂತ್ ಟಿ. ರೈ ಯವರ ವಿವಾಹವು ಚಿ।ಸೌ। ಮನಿಷರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

Private Circulation only

**BOOK POST**

To

...........................................................

...........................................................

...........................................................

If not delivered please return to

**SRI RAMAKRISHNA CREDIT CO-OPERATIVE SOCIETY LTD.,**

2nd Floor, Amruthothsav Building, Bunts Hostel Circle, Mangalore – 575 003.